ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

<u>ಸಿ.ಸಿ. ಸಂಖ್ಯೆ: 226/2016</u>

ಚಾಸಾಃ 7 ಫ್ರಾಸಾಃ 6

| | | |
|---|---|---|
| ಹೆಸರು | : | ಡಾ. ರಂಜಿತ್ ಹೆಚ್ ಸಿ |
| ಗಂಡನ/ತಂದೆಯ ಹೆಸರು | : | ಚನ್ನೇಗೌಡ ಹೆಚ್ ಬಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ತಜ್ಞ ವೈದ್ಯರು<br>ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆ |
| ವಾಸ | : | ಚನ್ನಪಟ್ಟಣ. |

<u>ದಿನಾಂಕ **21.01.2025** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ನಾನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ **2015** ರಿಂದ ಇಲ್ಲಿಯವರೆಗೂ ತಜ್ಞ ವೈದ್ಯರಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ ***01.01.2016*** ರಂದು ಚಾಸಾ-***1*** ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

***1.*** ಎಡಮೊಣಕಟ್ಟಿನ ಮುಂಭಾಗದಲ್ಲಿ ತರಚಿದ ಗಾಯ ***1*x *1*** ಸೆಂ ಮೀ ಅಳತೆಯುಳ್ಳ ಕಂಡು ಬಂದಿರುತ್ತದೆ.

***2.*** ಎಡ ಮುಂದೋಳಿನ ಹಿಂಭಾಗದಲ್ಲಿ ***2* x 2** ಸೆಂ ಮೀ ಅಳತೆಯುಳ್ಳ ತರಚಿದ ಗಾಯ ಕಂಡು ಬಂದಿರುತ್ತದೆ.

***3.*** ಎಡ ಮುಂಗೈನಲ್ಲಿ ಊತ ಕಂಡು ಬಂದಿರುತ್ತದೆ.

***4..*** ಎಡ ಮುಂಗೈನಲ್ಲಿ ಮತ್ತು ಎಡ ತೋಳಿನಲ್ಲಿ ನೋವು ಮತ್ತು ಊತ ಕಂಡು ಬಂದಿರುತ್ತದೆ.

*5.* ಎಡ ಭುಜ ಮತ್ತು ಕುತ್ತಿಗೆಯ ಭಾಗದಲ್ಲಿ ಊತ ಕಂಡು ಬಂದಿರುತ್ತದೆ.

ನಾನು ಮೇಲ್ಕಂಡ ಗಾಯಗಳಿಗೆ ಚಿಕಿತ್ಸೆ ನೀಡಿ ಅವರನ್ನು ಮೂಳೆ ತಜ್ಞರಿಗೆ ಶಿಪಾರಸ್ಸು ಮಾಡಿರುತ್ತೇನೆ. ಸದರಿ ಮೂಳೆ ತಜ್ಞರು ಕ್ಷ ಕಿರಣ ಮಾಡಿಸಿದ್ದು, ಕ್ಷಕಿರಣದಲ್ಲಿ ಚಾಸಾ*1* ರವರ ಎಡ ಮುಂಗೈಯಾಗಲೀ ಎಡ ಮುಂದೋಳಾಗಲೀ ಮೂಳೆ ಮುರಿತ ಕಂಡು ಬಂದಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಮೇಲಿನ ಗಾಯಗಳು ಸಾಮಾನ್ಯ ಸ್ವರೂದಪಾಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ನಿಪಿ-*5* ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-*5(*ಎ*)* ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು) **Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.